# ಅನುರಾಗ-ವಿರಾಗಗಳ ನಡುವೆ ಅನುಮಾನದ ಪರಾಗ

ಅಷ್ಟರಲ್ಲಿ ಎಸ್ಪಿ ಸಾಹೇಬರಿಂದ ಫೋನ್ ಬಂದಿತ್ತು.

'ಗುಡ್ ಇವ್ನಿಂಗ್ ಸಾರ್'.

'ಮಾಯಣ್ಣ ಅರ್ಥ ಮಾಡ್ಕೊಳ್ರೀ. ಇದು ಆರ್ಡಿನರಿ ಕೇಸಲ್ಲ. ಒಂದಿಬ್ರು ಶಂಕಿತರನ್ನ ವಿಚಾರಣೆಗೆ ಅಂತ ಡೀಟೈನ್ ಮಾಡಿ. ಆಮೇಲೆ ನೋಡೋಣ. ಕೊಲೆಯಾಗಿ ಮೂರು ದಿನ ಆಯ್ತು, ತನಿಖೆ ಮುಂದುಕ್ಕೇ ಹೋಗಿಲ್ಲ ಅಂತ ಮೀಡಿಯಾದಲ್ಲಿ ಜಾಲಾಡ್ತಾಯಿದ್ದಾರೆ ಇಲಾಖೇನ'.

'ಸರ್, ವಿ ಆರ್ ಡೂಯಿಂಗ್ ಅವರ್ ಬೆಸ್ಟ್. ಸ್ವಲ್ಪ ಟೈಮ್ ಕೊಡಿ...'

'ನೋಡಿ... ನೀವು ಬೇಗ ರಿಸಲ್ಟ್ ತೋರುಸ್ಲಿಲ್ಲಾ ಅಂದರೆ ಆಮೇಲೆ ನಾವು ಏನು ಮಾಡಕ್ಕಾಗಲ್ಲ. ನಿಮಗೆ ಅರ್ಥ ಆಗುತ್ತೆ ಅಂತ ತಿಳ್ಕೊಳ್ತೀನಿ'.

ಮಾಯಣ್ಣನ ತಲೆ ಕುದಿಯುವ ಕೊಳಗದಂತಾಗಿತ್ತು.

ಮಡಿಕೇರಿಯ ಪೊಲೀಸು ಠಾಣೆಗೆ, ನಾಳಿನ ಭೇಟಿಯ ಬಗ್ಗೆ ಮುಂದಾಗಿ ಸೂಚನೆ ಕೊಡಬೇಕಾಗಿತ್ತು. ಆ ಕಾರಣ ಅಲ್ಲಿಗೆ ಫೋನ್ ಮಾಡಿದ್ದ ಮಾಯಣ್ಣ. ಆ ಕಡೆಯಿಂದ–

'ಹಲೋ, ಸಬ್ ಇನ್ಸ್‌ಪೆಕ್ಟರ್ ಪೂವಯ್ಯ'.

ಮಾಯಣ್ಣನಿಗೆ ಪೂವಯ್ಯ ಹಳೆಯ ಸ್ನೇಹಿತನೇ ಆಗಿದ್ದ.

'ಮಾಯಣ್ಣ ಮಾತಾಡ್ತಿರೋದು...'

ಗೆಳೆಯರ ನಡುವೆ ಸಂತೋಷ ಸಂಭ್ರಮಗಳ ಕುಶಲೋಪರಿಗಳು ಮುಗಿದ ನಂತರ ಮಾಯಣ್ಣ ವಿಷಯಕ್ಕೆ ಬಂದಿದ್ದ.

'ನಾವು ನಾಳೆ ಅಮ್ಮು ಅವರ ಎಸ್ಟೇಟ್‌ಗೆ ಬರೋದಿದೆ... ಸುಮಾರು ಹತ್ತು ಗಂಟೆಗೆ ನಿಮ್ಮ ಸ್ಟೇಷನ್ನಲ್ಲಿ ಇರ್ತೀವಿ...'

'ಬನ್ನಿ ಮಾಯಣ್ಣ... ಈಗ ತಾನೇ ಅಮ್ಮು ಅವರ ಎಸ್ಟೇಟ್ ಮ್ಯಾನೇಜರ್ ಚಂದ್ರನ್ ನಾಯರ್‌ನ ಇಲ್ಲಿ ಠಾಣೆಗೆ ಕರೆಸಿದ್ವೀ...'

'ಅದೇನು?'

'ಆರೆಂಜ್ ಗುತ್ತಿಗೆದಾರ ರಿಯಾಜ್, ಅವನ ಮೇಲೆ ಕಂಪ್ಲೇಂಟ್ ಮಾಡಿದ್ದ'.

'ವಿವರವಾಗಿ ಹೇಳಿ ಪೂವಯ್ಯ'.

'ಅಮ್ಮು ಅವರ ಎಸ್ಟೇಟ್‌ನಲ್ಲಿ ಹತ್ತು ಎಕರೆ ಕಿತ್ತಳೆ ತೋಟ ಇದೆ, ಅದರ ಈ ವರ್ಷದ ಕಾಂಟ್ರಾಕ್ಟ್ ಈ ರಿಯಾಜ್ ಹದಿನೈದು ಲಕ್ಷಕ್ಕೆ ಹಿಡಿದಿದ್ದ. ಚಂದ್ರನ್‌ಗೆ ಕ್ಯಾಷ್‌ನಲ್ಲೇ ಎಲ್ಲ ಕೊಟ್ಟಿದ್ದಾನೆ. ಆದರೆ ಈ ಸಾರಿ ಮಳೆ ತುಂಬಾ ಜೋರಾಗಿ ಬಿದ್ದು, ಫಿಫ್ಟಿ ಪೆರ್ಸೆಂಟ್ ಅಷ್ಟೇ ಕಾಯಿ ಕಚ್ಚಿರೋದು. ರಿಯಾಜ್‌ಗೆ ಫುಲ್ ಲಾಸ್ ಆಗಿದೆ. ಸ್ವಲ್ಪ ವಾಪಸ್ ಮಾಡಿ ಅಂತ ಜೋರ್ ಮಾಡಿದ್ದಾನೆ. ಇಲ್ಲಿ ನನ್ನ ಹತ್ತಿರ ಗಲಾಟೆ ಮಾಡುದ್ರೇ, ಏನೂ ಕೊಟ್ಟೇ ಇಲ್ಲಾ ಅಂತೀನಿ. ಏನ್ ಮಾಡ್ತೀಯಾ ಅಂದಿದ್ದಕ್ಕೆ, ನಾನು ಬೆಂಗಳೂರಿಗೆ ಹೋಗಿ ಮೇಡಮ್‌ನೇ ಕೇಳ್ತೀನಿ ಅಂತ ಚಂದ್ರನ್ ಮನೆ ಮುಂದೆ ರಂಪ ಮಾಡಿದ್ದಾನೆ, ಅದಕ್ಕೆ ಚಂದ್ರನ್ ಸೌದೆ ತಗೊಂಡು ರಿಯಾಜ್ ಮೇಲೆ ಅಸಾಲ್ಟ್ ಮಾಡಿದ್ದಾನೆ. ಈಗ ರಿಯಾಜ್ ಸ್ವಲ್ಪ ಹೆಡ್ ಇಂಜುರಿ ಆಗಿ, ಆಸ್ಪತ್ರೆಯಿಂದಲೇ ಕಂಪ್ಲೇಂಟ್ ಲಾಡ್ಜ್ ಮಾಡಿದ್ದಾನೆ. ಇದೇ ಕೇಸ್ ಮೇಲೆ ಚಂದ್ರನ್‌ನ ಇಲ್ಲಿಗೆ ಕರೆಸಿದ್ದು'.

'ಅದೇನು ಕ್ಯಾಷ್ ಪೇಮೆಂಟು ಪೂವಯ್ಯ?'

'ವಿಚಾರ್ಸಿದ್ದೀನಿ... ಇಲ್ಲಿ ಏನೋ ಇದೆ ಅನ್ಸುತ್ತೆ ಮಾಯಣ್ಣ... ನೋಡುದ್ರೆ, ಎಸ್ಟೇಟ್ ಆಫೀಸ್ ಲೆಕ್ಕದ ಪುಸ್ತಕದಲ್ಲಿ ಈ ಹದಿನೈದು ಲಕ್ಷದ ಎಂಟ್ರೀನೇ ಇಲ್ಲ. ಅಲ್ಲಿ ಅಮ್ಮು ಅವರ ಮನೇಲಿ ಏನಾದರೂ ಕ್ಯಾಷ್ ರಿಕವರಿ ಆಗಿದೆಯಾ? ಈ ಬಗ್ಗೆ ನಾನೆ ನಿಮಗೆ ಫೋನ್ ಮಾಡೋಣ ಅಂತಿದ್ದೆ...'

'ಇಲ್ಲ ಪೂವಯ್ಯ, ಅಲ್ಲಿ ಹನ್ನೆರಡು ಸಾವಿರ ರೂಪಾಯಿ ಕ್ಯಾಷ್ ಇತ್ತು ಅಷ್ಟೇ'.

'ಈಗ ಇಲ್ಲಿ ಅದೇ ಸಮಸ್ಯೆ ಆಗಿರೋದು...'

'ಸರಿ ಪೂವಯ್ಯ, ನಾನು ನಾಳೆ ಹತ್ತು ಗಂಟೆಗೆ ಅಲ್ಲಿರ್ತೀನಿ ಮಾತಾಡೋಣ... ಗುಡ್ ನೈಟ್'.

ಯಾಕೋ ಈ ಪ್ರಕರಣ ದಿನೇ ದಿನೇ ಇನ್ನಷ್ಟು ಕಗ್ಗಂಟಾಗುತ್ತಿದೆ ಅನಿಸಿತ್ತು.

